ತಕ್ಕ ಶಾಸ್ತಿ ಮಾಡಿದ್ದೇನೆ. ಅದೇ ಹುಡುಗನನು ಹಿಂಬಾಲಿಸಿಕೊಂಡು ಇಲ್ಲಿಗೆ ಬಂದೆ. ನಾನು ಸರಿಯಾದ ಗುರಿ ತಲುಪಿದೆ'

ಕಾಕುಟ್ಟ ಸಶಬ್ದ ನಗುವಿನೊಂದಿಗೆ ನಕ್ಕು ಅವನ ಜೊತೆಗಾರನೊಂದಿಗೆ ಹೊರಗೆ ನಡೆದು ಕತ್ತಲೆಯಲ್ಲಿ ಕರಗಿ ಹೋದ.

ಮೇನಕಾ ದಿಗ್ಮೂಢಳಾಗಿ ನಿಂತಳು!

8

ಕಾಕುಟ್ಟ ನೀಡಿದ ಶಾಕ್‌ನಿಂದ ಚೇತರಿಸಿಕೊಳ್ಳಲು ಮೇನಕಾಳಿಗೆ ಕೆಲವು ಗಂಟೆಗಳೇ ಬೇಕಾದವು. ನಿದ್ದೆಯಿಂದ ಎಚ್ಚೆತ್ತವರಂತೆ ಹೊರಗೆ ಧಾವಿಸಿದವಳು ಮೊಬೈಲ್ ಫೋನ್‌ನಿಂದ ಇನ್ಸ್‌ಪೆಕ್ಟರ್ ರಾಜಧಾನಿಯನ್ನು ಸಂಪರ್ಕಿಸಲು ಸೋತಳು. ಫಾರ್ಮ್ ಹೌಸ್‌ನಿಂದ ಫೋನ್ ಕರೆ ಸಿಗುವುದಿಲ್ಲವೆನ್ನುವುದು ಗೊತ್ತಿದ್ದು ಆ ಕ್ಷಣದ ಆತುರಕ್ಕೆ ಕರೆ ಮಾಡಿವ ಯತ್ನ ನಡೆಸಿದಳು. ಆ ಯತ್ನ ವಿಫಲವಾದಾಗ ಒಳಗೆ ನಡೆದವಳು ಲ್ಯಾಂಡ್ ಲೈನ್‌ನಿಂದ ಠಾಣೆಗೆ ಕರೆ ಮಾಡಲು ರಿಸೀವರನ್ನು ಎತ್ತಿಕೊಂಡಳು. ಫೋನ್ ನಿಷ್ಕ್ರಿಯವಾಗಿತ್ತು. ಫೋನ್‌ನ ವಯರನ್ನು ತುಂಡರಿಸಲಾಗಿತ್ತು. ಆಶ್ಚರ್ಯದಿಂದ ನೋಡಿದವಳಿಗೆ ಕಾಕುಟ್ಟ ಒಳಗೆ ಬಂದು ಮಾಡಿದ ಕೆಲಸ ಅದೆನಿಸಿತು.

ಕ್ಷಣ ಹೊತ್ತು ತಡ ಮಾಡದೆ ಫಾರ್ಮ್ ಹೌಸ್‌ನ ದೀಪ ಆರಿಸಿ ಬಾಗಿಲು ಮುಚ್ಚಿ ಮೊಬೈಲ್‌ನ ಟಾರ್ಚ್ ಬೆಳಕು ಮೂಡಿಸಿ ನರಳಾಟದ ಸದ್ದು ಕೇಳಿದತ್ತ ಹೆಜ್ಜೆ ಹಾಕಿದಳು. ಅಲ್ಲಿಯವರೆಗೂ ಅವಳನ್ನು ಹಿಮ್ಮೆಟ್ಟಿಸಿದ್ದ ಭಂಡ ಧೈರ್ಯವೀಗ ಅವಳನ್ನು ಕೇಳಿಸಿಕೊಂಡಿದ್ದ ಸದ್ದಿನತ್ತ ಹೆಜ್ಜೆ ಹಾಕಿಸಿತು.

ಟಾರ್ಚ್‌ನ ಮಂದ ಬೆಳಕಿನಲ್ಲಿ ಗದ್ದೆ ಬದಿಯ ಹಾದಿ ಹಿಡಿದು ನಡೆದಳು. ಆಲೆಮನೆಯತ್ತ ಸಾಗುವಾಗ ಅವಳನ್ನು ಯಾವುದೋ ಸದ್ದು ಮತ್ತೆ ಎಚ್ಚರಿಸಿತು. ವ್ಯಕ್ತಿಯ ಸದ್ದು ಕೇಳಿದ್ದು ಇಲ್ಲಿಯೇ!

ಆ ವ್ಯಕ್ತಿ ಬೇರಾರು ಅಲ್ಲ ಕಿರಣನೇ ಅನ್ನುವುದು ಅವಳಿಗೆ ಖಾತರಿಯಾಗಿತ್ತು. ಸುತ್ತಲೂ ದೃಷ್ಟಿಸಿದಳು. ಯಾವ ಕುರುಹು ಕಾಣಿಸದು. ಹಾಗೆ ಮುಂದಕ್ಕೆ ಸಾಗಿ ಬಂಗಲೆಯ ಹಾದಿಯನ್ನು ಹಿಡಿದು ಸ್ವಲ್ಪ ದೂರ ಕ್ರಮಿಸುವಾಗ ನರಳಾಟದ ಕ್ಷೀಣ ಸದ್ದು ಕೇಳಿತು. ಅದರ ಜಾಡು ಹಿಡಿದು ನಡೆದಳು. ಆವ್ಯಕ್ತಿಗೆ ಅತೀ ಸಮೀಪವಾಗಿದ್ದೇನೆ ಅನಿಸಿತು ಮೇನಕಾಳಿಗೆ. ಟಾರ್ಚ್ ಬೆಳಕು ಆರುವ ಮುನ್ನ ಅಲ್ಲಿಗೆ ತಲುಪಬೇಕೆನ್ನುವ ನಿರ್ಧಾರದಿಂದ ಸರ ಸರನೆ ಗಿಡಗಂಟಿಗಳನ್ನು ಪಕ್ಕಕ್ಕೆ ಸರಿಸಿ ನೋಡಿದಳು. ವ್ಯಕ್ತಿ ಮೇಲ್ಮುಖವಾಗಿ ಬಿದ್ದು ಎದೆಯ ಭಾಗವನ್ನು ಒತ್ತಿ ಹಿಡಿದು ನರಳುತ್ತಿದ್ದ. ದೀಪವನ್ನು ಅವನ ಮುಖಕ್ಕೆ ಹರಿಯಬಿಟ್ಟಳು. ಸಂದೇಹವೇ ಇಲ್ಲ ಕಿರಣ!

ಕಿರಣನನ್ನು ಆ ಬಲ್ಲೆಯಿಂದ ಹೊರಗೆ ತರಲು ಸಾಧ್ಯವಾಗದೆಂದು ತಿಳಿದಾಗ ಸಣ್ಣ ಚೀತ್ಕಾರದೊಂದಿಗೆ ಹಿಂದಕ್ಕೆ ಸರಿದಳು. ಬಂಗಲೆಗೆ ಹೋಗಿ ಅಲ್ಲಿಂದ ಕೆಲಸದಾಳುಗಳನ್ನು ಕರೆದುಕೊಂಡು ಬರಬೇಕೆನ್ನುವ ಉದ್ದೇಶದಿಂದ ಅವಳಿ ಬಂಗಲೆಯ ಹಾದಿ ಹಿಡಿದಳು.

ಬಂಗಲೆಯ ಗೇಟಿನ ಬಳಿ ಬರುತ್ತಲೇ ಫಾರ್ಮ್ ಹೌಸ್‌ನ ಬಳಿಯಿಂದ ಬೈಕ್‌ನ ಸದ್ದು ಕೇಳಿತು. ಕಿವಿ ನಿಮಿರಿಸಿ ನಿಂತಳು. ಯಾರ ಬೈಕ್ನ ಸದ್ದು! ಅವಳ ಸ್ಮೃತಿಪಟಲದ ಮೇಲೆ ಅಚ್ಚಳಿಯದೆ ನಿಂತ ಆ ಸದ್ದು ಅದು!

ಕಿರಣ!

ಅದೇ ಬೈಕ್‌ನಲ್ಲಿ ತನ್ನನ್ನು ಅದೆಷ್ಟೋ ಬಾರಿ ಸಿಟಿಗೆಲ್ಲಾ ಸುತ್ತಾಡಿಸಿದ್ದ. ಹಿಂದಕ್ಕೆ ನಡೆದು ಬಿಡುವ ನಿರ್ಧಾರಕ್ಕೆ ಬಂದಳಾದರೂ ಅವಳ ಮೆದುಳು ಅಪಾಯದ ಕರೆಗಂಟೆಯನೊತ್ತಿತು. ಗೇಟು ತೆರೆಯುವಷ್ಟರಲ್ಲಿ ಅದೇ ಸದ್ದು ಮತ್ತೆ ಕೇಳಿಸಿತು.

ಅವಳಿಗೆ ಎಲ್ಲವೂ ಸ್ಪಷ್ಟವಾಯಿತು. ಕಿರಣನಿಗೆ ಅಪಾಯ ತಂದೊಡ್ಡಿದ ಕಾಕುಟ್ಟ ಮತ್ತು ಅವನ ಸ್ನೇಹಿತ ಕಿರಣನ ಬೈಕನ್ನು ಕದ್ದು ಕೊಂಡೊಯ್ಯುತ್ತಿದ್ದಾರೆ!

ಮೇನಕಾ ಬಂಗಲೆಯ ಗೇಟು ತೆರೆದು ಗಟ್ಟಿಯಾಗಿ ಕೂಗು ಹಾಕಿದಳು.

'ರಾಮಸ್ವಾಮಿ, ಅಲ್ಲಿ ಯಾರಿದ್ದೀರಿ? ಬೇಗ ಬನ್ನಿ' ಅವಳ ಕೂಗು ಬಂಗಲೆಗೆ ಬಡಿದು ಮಾರ್ದನಿಸಿತು.

ಕಾರ್ ಶೆಡ್ಡಿನ ಬಳಿಯೇ ಮಲಗುವ ರಾಮಸ್ವಾಮಿ ನಂಬಿಕಸ್ಥ ಆಳು. ಅವನೇ ಫಾರ್ಮ್ ಹೌಸ್‌ನ ಜವಾಬ್ದಾರಿಯನ್ನು ತೆಗೆದುಕೊಂಡವನು. ಮೇನಕಾಳ ಕೂಗಿಗೆ ಆಶ್ಚರ್ಯ ಬೀರಿ ಎದ್ದು ಓಡಿ ಬಂದ. ಬಂಗಲೆಯ ಒಳಗಿದ್ದ ಅಡುಗೆ ಕೆಲಸದ ಆಳು ಕೂಡ ಬಾಗಿಲು ತೆರೆದು ಹೊರಗೆ ಇಣುಕು ಹಾಕಿದ. ವೆರಾಂಡದ ಬೆಳಕಿನಲ್ಲಿ ಮೇನಕಾ ರಾಮಸ್ವಾಮಿಯೊಂದಿಗೆ ಏನೋ ಹೇಳುವುದು ಕೇಳಿತು. ಅವನೂ ಹೊರಗೆ ಬಂದು ಅವಳತ್ತ ನಡೆದ.

ಮೇನಕಾ ನಡೆದ ವಿಷಯಗಳನ್ನು ರಾಮಸ್ವಾಮಿಗೆ ತಿಳಿಸಿದಳು. ರಾಮಸ್ವಾಮಿ ಮಚ್ಚು, ದೊಣ್ಣೆ, ಪ್ರಖರ ಬೆಳಕು ಬೀರುವ ಆರು ಸೆಲ್ಲಿನ ಟಾರ್ಚ್ ಹಿಡಿದುಕೊಂಡು ಅವಳ ಜೊತೆಗೆ ಹೊರಟ. ಅಡುಗೆಯಾಳು ಅಲ್ಲಿಯೇ ನಿಂತು ಅವರಿಬ್ಬರು ಕಣ್ಮರೆಯಾಗುವವರೆಗೆ ನೋಡುತ್ತಿದ್ದ.

ಅವನು ಹಿಂತಿರುಗಬೇಕೆನ್ನುವಷ್ಟರಲ್ಲಿ ಕಾಶಮ್ಮ ತನ್ನ ಸಹಾಯಕಿಯ ಜೊತೆಗೆ ಕೆಳಗಿಳಿದು ಬಂದು ಹಜಾರದ ದೀಪ ಬೆಳಗಿಸಿದಳು. ಅವಳ ಮುಖದಲ್ಲಿ ಪ್ರಶ್ನಾರ್ಥಕ ಚಿಹ್ನೆಯಿರುವುದು ಅಡುಗೆ ಕೆಲಸದಾಳುವಿನ ಗಮನಕ್ಕೆ ಬಂತು. ಅವನು ಸಣ್ಣಮ್ಮೋರ ವಿಷಯಕ್ಕೆ ಮೂಗು ತೂರಿಸಲಾರ. ಹಾಗಾಗಿ ಕಾಶಮ್ಮನಿಗೆ ಏನನ್ನೂ ಹೇಳದೆ ತನ್ನ ಪಾಡಿಗೆ ತಾನು ಒಳಗೆ ನಡೆದ.

ಕಾಶಮ್ಮ ಏನೊಂದೂ ಅರ್ಥವಾಗದೆ ತನ್ನ ಸಹಾಯಕಿಯ ಮುಖ ನೋಡಿದಳು. ಸಹಾಯಕಿ ಸಾಂತ್ವನದ ಪದಗಳನ್ನು ಹೇಳಿ ಅವಳನ್ನು ಸಮಾಧಾನಿಸಿದಳು.

'ಏನಿಲ್ಲಮ್ಮಾ, ನಿಮ್ಮ ಭ್ರಮೆ ಅಷ್ಟೆ'

ಕಾಶಮ್ಮ ನಿಟ್ಟುಸಿರಿಟ್ಟು ಭಾರವಾದ ಹೆಜ್ಜೆಗಳೊಂದಿಗೆ ಮೆಟ್ಟಿಲೇರಿದಳು.

ಮೇನಕಾ ರಾಮಸ್ವಾಮಿಯ ಜೊತೆಗೆ ಆ ಕತ್ತಲೆಯಲ್ಲಿ ಹೋದ ವಿಷಯ ಕಾಶಮ್ಮನ ಅರಿವಿಗೆ ಬರಲಿಲ್ಲ. ಆಳುಗಳು ಕೂಡ ಅದನ್ನು ಹೇಳಲಿಲ್ಲ.

ಮೇನಕಾ ಈ ವಿಷಯ ಕಾಶಮ್ಮನಿಗೆ ತಿಳಿದಿಲ್ಲವೆಂದುಕೊಂಡು ರಾಮಸ್ವಾಮಿಯ ಜೊತೆಗೆ ಬಿರಬಿರನೆ ಹೆಜ್ಜೆ ಹಾಕಿ ಫಾರ್ಮ್ ಹೌಸ್‌ನತ್ತ ನಡೆಯುತ್ತಿದ್ದಾಗ ಮತ್ತದೆ ಬೈಕ್‌ನ ಸದ್ದು! ಅದೂ ಅತೀ ಸಮೀಪದಲ್ಲಿ!

ತಕ್ಷಣವೇ ರಾಮಸ್ವಾಮಿಯನ್ನು ನಿಲ್ಲಿಸಿದಳು.

ಬೈಕ್‌ನ ಪ್ರಖರವಾದ ಬೆಳಕು ರಸ್ತೆಯಂಚಿಗೆ ನಿಂತಿದ್ದ ಇಬ್ಬರತ್ತಲೂ ಬಿತ್ತು. ಕಣ್ಣಿಗೆ ಕೈಯನ್ನು ಅಡ್ಡಲಾಗಿ ಹಿಡಿದು ಬೆಳಕಿನ ಪ್ರಖರತೆಯಿಂದ ತಪ್ಪಿಸಿಕೊಂಡರೂ ಬೈಕ್ ಅತೀ ಸಮೀಪವಾಗಿ ನಿಂತಾಗ ರಾಮಸ್ವಾಮಿಯ ಕೈ ಹಿಡಿದು ಎಚ್ಚರಿಸಿದಳು.

ರಾಮಸ್ವಾಮಿ ಆಕ್ರಮಣಕ್ಕೆ ಸಜ್ಜಾದವನಂತೆ ನಿಂತ. ಆದರೆ...

ಬೈಕ್‌ನಲ್ಲಿದ್ದ ವ್ಯಕ್ತಿ ದೀಪ ಆರಿಸಿ ಮಾತು ತೆಗೆದಾಗ ರಾಮಸ್ವಾಮಿಯ ಸೆಟೆದ ದೇಹ ಮೊದಲ ಸ್ಥಿತಿಗೆ ಬಂತು.

'ಪಾರ್ಟಿ ಅರೇಂಜ್ ಮಾಡ್ಬಿಟ್ಟು... ನೀನು ಇಲ್ಲಿ ಮೇನಕಾ?'

ಮೇನಕಾ ಅವನನ್ನು ನೋಡಿ ಇನ್ನೂ ಆಘಾತದಿಂದ ಚೇತರಿಸಿಕೊಂಡಿಲ್ಲ. ಅವಳು ಜಡ ವಸ್ತುವಿನಂತೆ ನಿಂತಿದ್ದಳು. ಆತ ಬೈಕ್‌ನಿಂದ ಇಳಿದು ಅವಳ ಸಮೀಪಕ್ಕೆ ಬಂದು ನಿಂತು ರಾಮಸ್ವಾಮಿಯನ್ನು ಲೆಕ್ಕಿಸದೆ ಅವಳ ಕೈಯನ್ನು ಬಿಗಿಯಾಗಿ ಹಿಡಿದುಕೊಂಡ.

'ಮೇನಕಾ, ನೀನು ನನಗೆ ಮೋಸ ಮಾಡ್ಬಿಟ್ಟೆ. ಎಲ್ಲಿ ನಿನ್ನ ಪಾರ್ಟಿ? ಈ ಹೊತ್ತಿನಲ್ಲಿ ನೀನು ಹೊರಟಿರೋದು ಎಲ್ಲಿಗೆ?'

ಮೇನಕಾ ತಲೆಗೆ ಮೊಟಕಿಸಿಕೊಂಡಂತೆ ಎಚ್ಚೆತ್ತಳು.

'ಕಿರಣ, ನಿನಗೇನು ಆಗಿಲ್ಲ ತಾನೆ?' ಅವನ ಕೈಗಳನ್ನು ಬಿಡಿಸಿಕೊಂಡು ಅವನ ತಲೆಯಲ್ಲಿ ಕೈಯಾಡಿಸುತ್ತಾ ನುಡಿದಳು.

ಕಿರಣ ಆಶ್ಚರ್ಯ ವ್ಯಕ್ತಪಡಿಸಿದ.

'ನನಗೇನಾಗಿದೆ? ನಾನು ಹೊರಡೋದು ಸ್ವಲ್ಪ ಹೊತ್ತಾಯ್ತು. ನಿಂಗೆ ಸರ್‌ಪ್ರೈಸ್ ಮಾಡ್ತೀನೀಂತ ಹೇಳಿದ್ದೆ. ಅದಕ್ಕೆ ಲೇಟಾಯ್ತು'

ಕಿರಣನ ಮಾತುಗಳನ್ನು ಕೇಳಿ ಮೇನಕಾಳಿಗೆ ಅತೀವ ಆಶ್ಚರ್ಯದ ಜೊತೆಗೆ ಬೆರಗು. ಹಾಗಾದರೆ ಕಾಕುಟ್ಟನಿಂದ ಆಕ್ರಮಣಕ್ಕೊಳಗಾದ ವ್ಯಕ್ತಿ ಯಾರು? ಕಿರಣನ ಹಾಗೆಯೇ ಇತ್ತಲ್ಲವೆ? ತಾನು ಅವನನ್ನು ಸರಿಯಾಗಿ ಗಮನಿಸಿದ್ದೇನೆ. ಅದು ಕಿರಣನೇ! ಕಿರಣ ಈಗ ತನ್ನ ಬಳಿ ಏನೂ ನಡೆದಿಲ್ಲವೆನ್ನುವಂತೆ ನಾಟಕವಾಡುತ್ತಿರುವನೆ?

'ಕಿರಣ, ನಿಜ ಹೇಳು. ನೀನು ಈಗ ಬರುತ್ತಿರುವುದೆ?'

'ಹೌದು, ಫಾರ್ಮ್ ಹೌಸ್‌ಗೆ ಹೋಗಿ ಬಂದೆ. ಅಲ್ಲಿ ನೀನು ಇರಲಿಲ್ಲ. ಪಾರ್ಟಿ ವಿಷ್ಯ ಮರ್ತು ಬಿಟ್ಟಿಯೋ ಏನೋ ಅಂದುಕೊಂಡು ನಾನು ಬಂಗಲೆಗೆ ಬರೋ ಪ್ರಯತ್ನ ಮಾಡ್ದೆ'